ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 1-8
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತುಮಕೂರು ಜಿಲ್ಲೆಯಲ್ಲಿ ಹೊಯ್ಸಳ ಅರಸರ ಧಾರ್ಮಿಕ ಶಾಸನಗಳು

**ಶ್ರೀನಿವಾಸ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

**Abstract:**

*ಹೊಯ್ಸಳರು ಕ್ರಿ.ಶ. 10 ಮತ್ತು 11ನೇ ಶತಮಾನದ ಎಲ್ಲ ರಾಜಮನೆತನದವರಂತೆ ಅವರ ವಂಶಾವಳಿಯನ್ನು ಪುರಾಣದ ಕಾಲವೆಂದು ಗುರುತಿಸಿದ್ದಾರೆ. ಅವರ ವಂಶವನ್ನು ಯದುವಂಶಕ್ಕೆ ಸಂಬಂಧಿಸಿದ್ದೆಂದು ಉಲ್ಲೇಖಿಸಿದ್ದಾರೆ. ಅವರು 11ನೆಯ ಶತಮಾನದಲ್ಲಿದ್ದ ರಾಜಕೀಯ ಗೊಂದಲದ ಲಾಭ ಪಡೆದುಕೊಂಡು ನಿಧಾನವಾಗಿ ಅಧಿಕಾರದ ಗದ್ದುಗೆಯನ್ನೇರ ತೊಡಗಿದರು. ಇವರ ಆಳ್ವಿಕೆಗೆ ಇಂದಿನ ತುಮಕೂರು ಜಿಲ್ಲೆಯ ಬಹುತೇಕ ಭಾಗಗಳು ಸೇರಿದ್ದವು ಎಂಬುದಕ್ಕೆ ಈ ಭಾಗದಲ್ಲಿ ದೊರೆತಿರುವ ಶಾಸನಗಳು ಸಾಕ್ಷಿಯಾಗಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ತುಮಕೂರು ಜಿಲ್ಲೆಯಲ್ಲಿ ದೊರೆತಿರುವ ಹೊಯ್ಸಳ ಅರಸರ ಧಾರ್ಮಿಕ ಶಾಸನಗಳನ್ನು ಅವಲೋಕಿಸಲಾಗಿದೆ. ಈ ಶಾಸನಗಳು ಅಂದು ಪ್ರಚಲಿತದಲ್ಲಿದ್ದ ಜೈನ, ಬೌದ್ಧ, ಶೈವ, ವೈಷ್ಣವ, ಕಾಳಮುಖ ಮತಪಂಥಗಳಿಗೆ ಹಾಗು ಧಾರ್ಮಿಕ ಸಮನ್ವಯತೆ ಸಂಬಂಧಿಸಿದ ಅಮೂಲ್ಯ ಮಾಹಿತಿಯನ್ನು ನೀಡುತ್ತವೆ.*

**Keywords:** *ಕರ್ನಾಟಕ ಇತಿಹಾಸ, ತುಮಕೂರು ಜಿಲ್ಲೆ, ಹೊಯ್ಸಳರು, ಧಾರ್ಮಿಕ ಶಾಸನಗಳು.*

## ಪೀಠಿಕೆ

ತಿಪಟೂರಿನ ಕ್ರಿ.ಶ.1162ರ ಶಾಸನದಲ್ಲಿ[1] ಹೊಯ್ಸಳ ನರಸಿಂಹನ ಮಹಾಪ್ರಧಾನ ಉತ್ತಮ ಚೋಳನ ಮಗ ಮನ್ನಹ, ತನ್ನ ತಂದೆಯ ಹೆಸರಿನಲ್ಲಿ ಚೋಳೇಶ್ವರ ದೇವಾಲಯವನ್ನು ಪ್ರತಿಷ್ಠೆ ಮಾಡಿಸುತ್ತಾನೆ. ಈ ದೇವರ ನೈವೇದ್ಯಕ್ಕೆ, ನಂದಾದೀವಿಗೆಗೆ ಶ್ರೀ ಗಂಗರಾಶಿ ಪಂಡಿತನಿಗೆ ದಾನ ನೀಡಿದ ಉಲ್ಲೇಖವಿರುವುದನ್ನು ಕಾಣಬಹುದು.

ಹಾಗೆಯೇ ಗುಬ್ಬಿ ತಾಲೂಕಿನ ಆಲದಗೆರೆಯ ಕ್ರಿ.ಶ.1163ರ ಶಾಸನದಲ್ಲಿ[2] ನರಸಿಂಹನ ಅಧಿಕಾರಿಗಳಾದ ವಾಜೀವಂಶದ ಹುಳ್ಳ, ಲಕ್ಷ್ಮರಸ, ಅಮರೇಶ್ವರ ದಂಡನಾಯಕರು ಶ್ರೀ ಕಲಿದೇವ, ಬ್ರಹ್ಮೇಶ್ವರ ದೇವರುಗಳಿಗೆ ದಾನ ನೀಡಿದ್ದಾರೆ. ಈ ಅಧಿಕಾರಿಗಳು ಪ್ರಮುಖವಾಗಿ ಜೈನ ಧರ್ಮದ ಹಿನ್ನೆಲೆಯವರಾಗಿದ್ದು, ಶೈವ ದೇವಾಲಯಕ್ಕೆ ದಾನ ನೀಡಿರುವುದು ವಿಶೇಷವಾಗಿದೆ.

ಮುಂದುವರಿದು, ಗುಬ್ಬಿ ತಾಲೂಕಿನ ಆಲದಗೆರೆಯ ಕ್ರಿ.ಶ.1163ರ ಶಾಸನದಲ್ಲಿ ನರಸಿಂಹನ ಭಂಡಾರಿಯಾದವಾಜಿವಂಶದವರಾದ ಹುಳ್ಳಚಮೂಪ, ಲಕ್ಷ್ಮರಸ, ಅಮರೇಶ್ವರ ದಂಡನಾಯಕರು, ಶ್ರೀಕಲಿದೇವರ ಬ್ರಹ್ಮದೇವರ ದೇವಾಲಯಕ್ಕೆ ದಾನ ನೀಡುತ್ತಾರೆ. ಇಲ್ಲಿ ಹುಳ್ಳದಂಡನಾಯಕ ಒಬ್ಬ ಜೈನ ಅಧಿಕಾರಿಯಾಗಿದ್ದನು. ಪ್ರಸ್ತುತ ಶಾಸನದಲ್ಲಿ ಒಂದು

**Please cite this article as:** ಶ್ರೀನಿವಾಸ. (2024). ತುಮಕೂರು ಜಿಲ್ಲೆಯಲ್ಲಿ ಹೊಯ್ಸಳ ಅರಸರ ಧಾರ್ಮಿಕ ಶಾಸನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(5), 1–8

ಶೈವ ದೇವಾಲಯಕ್ಕೆ ದಾನ ನೀಡಿದ್ದಾನೆ.[3] ಹೀಗೆ ನರಸಿಂಹನ ಭಂಡಾರಿಯಾದ ಹುಳ್ಳದಂಡನಾಯಕ ಒಬ್ಬ ಜೈನನಾಗಿದ್ದು, ಜೈನ, ಶೈವ ಮತ್ತು ಶ್ರೀ ವೈಷ್ಣವ ಈ ಮೂರು ಧರ್ಮಗಳಿಗೆ ದಾನ ನೀಡಿರುವುದು ಇವನ ಸರ್ವ ಧರ್ಮ ಸಮನ್ವಯತೆಯನ್ನು ತಿಳಿಸುತ್ತದೆ.

ಜೊತೆಗೆತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹೆಗ್ಗೆರೆಯ ಕ್ರಿ.ಶ.1163ರ ಶಾಸನದಲ್ಲಿ 'ಶ್ರೀ ಮೂಲಸಂಘದ ದೇಸಿಯ ಗಣದ ಪೊಸ್ತಕ ಘಚ್ಚದ ಕೊಂಡಕುನ್ದಾನ್ವಯದ ಮಾಣಿಕ್ಯನಂದಿ ಸಿದ್ಧಾಂತದೇವರ ಶಿಷ್ಯರಾದ ಮೇಘಚಂದ್ರ ಭಟ್ಟಾರಕ ದೇವರು ಸನ್ಯಸನ ವಿಧಿಯಿಂದ ಸಮಾಧಿಯಾಗಿ ಸ್ವರ್ಗಸ್ಥರಾದರು' ಎಂಬ ಮಾಹಿತಿ ಇದೆ. ಇದು ಮೇಘ ಚಂದ್ರ ಭಟ್ಟಾರಕ ಯತಿಯು ಸಮಾಧಿ ಮರಣ ಹೊಂದಿದ ವಿಚಾರವನ್ನು ತಿಳಿಸುತ್ತದೆ.[4] ಜೊತೆಗೆ ಇದೇ ಶಾಸನದಲ್ಲಿ ಹೊಯ್ಸಳ ನಾರಸಿಂಹನ ಸಾಮಂತ ಚಟ್ಟನ ಸತಿ ಶಾಂತಲೆಯ ಧರ್ಮ ಸಮನ್ವಯವನ್ನು ಹೇಳುವ ಸಂದರ್ಭದಲ್ಲಿ "ಸದಾಚಾರಮೆಂಬೀ ಗುಣೋನ್ನತಿಯಂ ತಾಳ್ದಿ ಮಹೇಶ್ವರಾಗಮ ಜಿನಧರ್ಮ, ಸದ್ವೈಷ್ಣವಾಶ್ರಿತ, ಬೌದ್ಧಾಗಮವೆಂಬ ನಾಲ್ಕುಸಮೆಯ ವ್ಯಾಪಾರವನ್ನು ಮಾರ್ಪಸಂಗತ ಚಾತುರ್ಯೆಗೆ ಕಾನ್ತೆ ಶಾಂತಲೆಗೆ ಪೇಳಾರುಂಸಮಂಬಪ್ಪರೇ"[5] ಎಂದು ಉಲ್ಲೇಖವಿದೆ. ಇಲ್ಲಿಯೂ ನಾಲ್ಕು ಧರ್ಮಗಳ ಉಲ್ಲೇಖವಿರುವುದು ಗಮನಾರ್ಹವಾದುದಾಗಿದೆ.

ಹಾಗೆಯೇ ತುಮಕೂರು ಜಿಲ್ಲೆಯಲ್ಲಿ ಹೊಯ್ಸಳರ ಆಳ್ವಿಕೆಯಲ್ಲಿ ಜೈನಧರ್ಮವು ತನ್ನ ಅಸ್ತಿತ್ವವನ್ನು ಹೊಂದಿತ್ತು ಎಂಬುದಕ್ಕೆ ಚಿಕ್ಕನಾಯಕನಹಳ್ಳಿ ತಾಲೂಕಿನ ಹೆಗ್ಗೆರೆಯ ಶಾಸನವು[6] ಸಾಕ್ಷಿಯಾಗಿದೆ. ಈ ಶಾಸನದಲ್ಲಿ "ಶ್ರೀ ಮೂಲಸಂಘದ ದೇಸಿಯ ಗಣದ ಪುಸ್ತಕಘಚ್ಚದ ಶ್ರೀ ಚಂದ್ರಾಯಣ ದೇವರ ಶ್ರಾವಕ ಶಿಷ್ಯ ಶ್ರೀಮನ್ಮಹಾಸಾಮಂತ ಗೋವಿದೇವ. ತನ್ನ ಹೆಂಡತಿ ಮಹಾದೇವಿ ನಾಯಕಿಗೆ ಪರೋಕ್ಷ ವಿನಯವಾಗಿ, ಗುಣಚಂದ್ರ ಸಿದ್ಧಾಂತದೇವರ ಶಿಷ್ಯರಾದ ಮಾಣಿಕನನ್ದಿ ಸಿದ್ಧಾಂತ ದೇವರಿಗೆ ಹೆಗ್ಗೆರೆಯಲ್ಲಿ ಚನ್ನಪಾರ್ಶ್ವದೇವರ ಬಸದಿಯನ್ನು ಮಾಡಿಸಿ ಕೊಟ್ಟನು. ಈ ಬಸದಿಯ ಅಷ್ಟವಿಧಾರ್ಚನೆ ಮತ್ತು ಮುನಿಗಳ ಆಹಾರಾಧಾನಕ್ಕೆಂದು ಶಾಂತಲ ದೇವಿಯ ಮಗ ಬಿಟ್ಟಿದೇವ ತನಗೆ ಶ್ರೇಯಾರ್ಥವಾಗಿ ಕ್ರಿ.ಶ.1161ರಲ್ಲಿ ಸವಣಗೆರೆಯ ಹಲವಾರು ಆದಾಯಗಳನ್ನು ದಾನ ನೀಡುತ್ತಾನೆ. ಜೊತೆಗೆ ಇದೇ ಶಾಸನದಲ್ಲಿ ಗೋವಿದೇವನ ಅಳಿಯ. ಜಕ್ಕಣ್ಣ ಗೋವಿದೇವ ನಿರ್ಮಿಸಿದ ಬಸದಿಗೆ, ತಮ್ಮತ್ತೆ ಮಹಾದೇವಿನಾಯಕಿಗೆ ಪರೋಕ್ಷ ವಿನಯವಾಗಿ ಮಲ್ಲಿಗೆಗೆರೆಯ ಕೆಳಗಿನ ಭೂಮಿಯನ್ನು ದಾನವಾಗಿ ನೀಡುತ್ತಾನೆ. ಹೀಗೆ ನರಸಿಂಹನ ಸಾಮಂತ ಗೋವಿದೇವ ನಿರ್ಮಿಸಿದ ಬಸದಿಗೆ ಬಿಟ್ಟಿಯಣ್ಣ ಹಾಗೂ ಅವನ ಅಳಿಯ ಹೆಗ್ಗಡೆ ಜಕ್ಕಣ್ಣ ಇವರುಗಳು ನೀಡಿದ ದಾನದ ವಿವರಣೆಯನ್ನು ಒಳಗೊಂಡಿದೆ.[7]

ಜೊತೆಗೆ ಹೊಯ್ಸಳ ಅರಸ ಒಂದನೇ ನರಸಿಂಹನ ಕಾಲದ ಮತ್ತೊಬ್ಬ ಸಾಮಂತ ಮಗರೆನಾಡು ಮುನ್ನೂರು ಪ್ರದೇಶವನ್ನಾಳುತ್ತಿದ್ದ ಗೋವಿ ದೇವನನ್ನು ಚಿಕ್ಕನಾಯಕನಹಳ್ಳಿ ತಾಲೂಕಿನ ಯಾದಘಟ್ಟ ಶಾಸನದಲ್ಲಿ "ಮಾಹೇಶ್ವರ ಬೌದ್ಧ ವೈಷ್ಣವಾರುಹತ ಚತುಸ್ಸಮಯ ಸಮುದ್ಧರಣ" ಎಂಬ ಬಿರುದಿನಿಂದ ಉಲ್ಲೇಖಿಸಲಾಗಿದೆ.[8] ಇದರಿಂದ ಗೋವಿದೇವನೂ ಸಹ ಶೈವ, ಬೌದ್ಧ, ವೈಷ್ಣವ, ಜೈನ ಧರ್ಮಗಳ ರಕ್ಷಕನಾಗಿದ್ದ ಎಂದು ತಿಳಿದು ಬರುತ್ತದೆ. ಗೋವಿದೇವನ ಹೆಂಡತಿ ಜೈನಳಾಗಿದ್ದು ಹುಳಿಯಾರಿನಲ್ಲಿ ಚಾಂದ್ರಾಯಣ ಮುನಿಯ ಪ್ರತಿಮೆಯನ್ನು ಮಾಡಿಸುತ್ತಾಳೆ.[9] ಜೊತೆಗೆ ಚಿಕ್ಕನಾಯಕನ ಹಳ್ಳಿ ತಾಲೂಕಿನ ಹೆಗ್ಗೆರೆಯ ಶಾಸನದಲ್ಲಿ ಗೋವಿದೇವನನ್ನು ಚಂದ್ರಾಯಣ ದೇವರ ಶಿಷ್ಯ ಎಂದು ಕರೆಯಲಾಗಿದೆ ಮತ್ತು ಗೋವಿದೇವ ತನ್ನ ಹೆಂಡತಿ ಮಹದೇವ ನಾಯಕಿತಿಗೆ ಪರೋಕ್ಷ ವಿನಯವಾಗಿ ಹೆಗ್ಗೆರೆಯಲ್ಲಿ ಚನ್ನಪಾರ್ಶ್ವ ದೇವರ ಬಸದಿಯನ್ನು ಮಾಡಿಸಿದನು ಎಂಬ ಮಾಹಿತಿ ದೊರೆಯುತ್ತದೆ.[10] ಈ ಎಲ್ಲಾ

ಮಾಹಿತಿಗಳು ಗೋವಿದೇವನ ಜೈನ ಧರ್ಮದ ಕೊಡುಗೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ತುಮಕೂರು ಜಿಲ್ಲೆಯ ಅದರಲ್ಲೂ ಹೊಯ್ಸಳರ ಕಾಲದ ಅತ್ಯಂತ ಪ್ರಮುಖ ಶಾಸನ ಎಂದು ಗುರುತಿಸಲ್ಪಟ್ಟಿರುವುದು ಕೈದಾಳದ ಶಾಸನ. ಈ ಶಾಸನವು ಜೈನ, ಶೈವ, ಬೌದ್ಧ, ವೈಷ್ಣವ ಹೀಗೆ ಅಂದು ಅಸ್ತಿತ್ವದಲ್ಲಿದ್ದ ಮತಧರ್ಮಗಳ ಬಗ್ಗೆ ಮಾಹಿತಿ ನೀಡುವುದಲ್ಲದೆ ಧರ್ಮ ಸಮನ್ವಯತೆಯನ್ನು ಬಿತ್ತರಿಸುತ್ತದೆ. ಅದರಂತೆ, ಹೊಯ್ಸಳ ಅರಸ ಒಂದನೇ ನರಸಿಂಹನ ಮಹಾಸಾಮಂತ ಮರುಗೆರೆನಾಡಾಳ್ವ ಗೂಳಿಯ ಬಾಚಿದೇವ. ವಿವಿಧ ಧರ್ಮಗಳಿಗೆ ನೀಡಿದ ಕೊಡುಗೆಗಳಿಂದ ಪ್ರಸಿದ್ಧನಾಗಿದ್ದಾನೆ. ಇವನು ಕ್ರಿ.ಶ.1151ರಲ್ಲಿ ತುಮಕೂರಿನ ಗೂಳೂರು ಹೋಬಳಿಯ ಕೈದಾಳ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನು. ಇಲ್ಲಿ ದೊರೆತಿರುವ ಶಾಸನದಲ್ಲಿ ಅಂದರೆ ಕೈದಾಳ ಶಾಸನದಲ್ಲಿ[11] ಇವನ ಪೂರ್ವಿಕರನ್ನು ಮಾನ್ಯಖೇಡ ಪುರವರಾಧೀಶರು ಎಂದು ಉಲ್ಲೇಖಿಸಲಾಗಿದ್ದು, ಇವರು ಪ್ರಾರಂಭದಲ್ಲಿ ರಾಷ್ಟ್ರಕೂಟರ ಸಾಮಂತರಾಗಿದ್ದು ನಂತರದ ದಿನಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿ ಹೊಯ್ಸಳರು ಪ್ರಬಲರಾದಾಗ ಹೊಯ್ಸಳರ ಸಾಮಂತರಾದರು ಎಂಬ ಅಂಶ ತಿಳಿದು ಬರುತ್ತದೆ.

ಜೊತೆಗೆ ಈ ಶಾಸನದಲ್ಲಿ "ಜೈನಭವನವನುದ್ಧರಿಸಿ, ಶಿವಾಲಯಂಗಳ ಮುದದಿಂದನುದ್ಧರಿಸಿ, ವಿಷ್ಣುಗೇಹಮನುದ್ದರಿಸಿದನಲ್ತೆಬಾಚಿ ಜಸದುನ್ನತಿಯಂ" ಎಂದು ಉಲ್ಲೇಖಿತವಾಗಿದ್ದು ಇದು ಗೂಳಿಯ ಬಾಚಿ ದೇವನ ಸರ್ವಧರ್ಮ ಸಮನ್ವಯತೆಯನ್ನು ತಿಳಿಸುತ್ತದೆ. ಅದೂ ಅಲ್ಲದೆ ಬಾಚಿದೇವನ ಹೆಂಡತಿಯಾದ ಭೀಮಲೆ ಜೈನ ಧರ್ಮದ ಕುಟುಂಬದಿಂದ ಬಂದವಳು. ಇವಳ ನೆನಪಿಗಾಗಿ ಪತಿ ಬಾಚಿ ದೇವನು ಪರೋಕ್ಷ ವಿನಯವಾಗಿ ಭೀಮ ಜಿನಾಲಯ ಎಂಬ ಬಸದಿಯನ್ನು ಮಾಡಿಸಿ, ಶ್ರೀ ಚೆನ್ನಪಾರ್ಶ್ವ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾನೆ. ಹೀಗೆ ತನ್ನ ಹೆಂಡತಿಯ ಮರಣಾನಂತರ ಅವಳ ನೆನಪಿಗಾಗಿ ನಿರ್ಮಿಸಿದ ಚೆನ್ನಪಾರ್ಶ್ವರ ದೇವರ ಬಸದಿಯ ಬಗ್ಗೆ ಸಹ ಇದೇ ಶಾಸನದಲ್ಲಿ ಮಾಹಿತಿ ದೊರೆಯುತ್ತದೆ.[12]

ಜೊತೆಗೆ ಗೂಳಿ ಬಾಚಿದೇವ ನಿರ್ಮಿಸಿದ ಈ ಬಸದಿಗೆ ಇದೇ ಶಾಸನದಲ್ಲಿ ಉಲ್ಲೇಖವಾಗಿರುವ ಸೇನುಬೋವ ಮಾರಮಯ್ಯ ಎಂಬುವನು ಸಾಮಂತಗೂಳಿಯ ಬಾಚಿ ದೇವನ ಕೈಯಿಂದ ಭೂಮಿಯನ್ನು ಪಡೆದು ಮುದುಗೆರೆಯಲ್ಲಿ ಮಾರ ಸಮುದ್ರವೆಂಬ ಕನ್ನೆಗೆರೆಯನ್ನು ಕಟ್ಟಿಸಿ ಆ ಕೆರೆಯನ್ನು ಭೀಮ ಜಿನಾಲಯದ ಚನ್ನಪಾರ್ಶ್ವ ದೇವರಿಗೆ ದಾನ ನೀಡುತ್ತಾನೆ ಎಂದು ತಿಳಿಸುತ್ತದೆ. ಇದೇ ಗೂಳಿಯ ಬಾಚಿದೇವನ ಶಾಸನದಲ್ಲಿ "ಶಿವಾಯಧಾತ್ರೇ ಸುಗತಾಯ ವಿಷ್ಣುವೇ ಜಿನಾಯತಸ್ಮೈಸಕಳಾತ್ಮನೇ ನಮಃ"[13] ಎಂಬ ಶ್ಲೋಕದಲ್ಲಿ ಶಿವ, ಸುಗತ (ಬುದ್ಧ), ವಿಷ್ಣು, ಜಿನ, ಇವೆಲ್ಲಾ ಒಂದೇ ಆಗಿದ್ದು, ಇವು ಪರಮಾತ್ಮನಿಗಿರುವ ಬೇರೆ ಬೇರೆ ಹೆಸರುಗಳು ಎಂದು ಹೇಳಿದೆ. ಈ ಶ್ಲೋಕದಲ್ಲಿ ಶಿವ ಬುದ್ಧ, ವಿಷ್ಣು, ಜಿನ ಇವರೆಲ್ಲರೂ ಒಂದೇ ಎಂಬ ಅರ್ಥವನ್ನೊಳಗೊಂಡಿದೆ. ಇದೇ ಶಾಸನದಲ್ಲಿ ಜಿನ, ಹರ, ಬ್ರಹ್ಮ, ಅಚ್ಯುತ, ಬುದ್ಧ, ಇವರೆಲ್ಲರಿಂದಲೂ, ಅಂದರೆ ತೀರ್ಥಂಕರನಿಂದ ಸುಖ ಸಂಪದ, ಹರನಿಂದ ಕೀರ್ತಿ, ಬ್ರಹ್ಮನಿಂದ ದೀರ್ಘಾಯುಷ್ಯ, ಅಚ್ಯುತನಿಂದ ಸಂಪತ್ತು ಮತ್ತು ಬುದ್ಧನಿಂದ ಜಯ ಮತ್ತು ಅಭಿವೃದ್ಧಿಯು, ಬಾಚಿ ದೇವನಿಗೆ ಚಂದ್ರ ಮತ್ತು ಮಂದರಪರ್ವತ ಇರುವವರೆಗೂ ಪ್ರಾಪ್ತವಾಗಲಿ ಎಂದು ಅರ್ಥವನ್ನೊಳಗೊಂಡಿರುವ ಪ್ರಾರ್ಥನಾರೂಪದ ಪದ್ಯ ಪ್ರಮುಖವಾಗಿದೆ. ಮತ್ತೆ ಇದೇ ಶಾಸನದಲ್ಲಿ ಬಾಚಿಯು ಭೂಮಿಯಲ್ಲಿ ನಾಲ್ಕೂ ಧರ್ಮಗಳ ಅಭಿವೃದ್ಧಿಗೆ ಕಲ್ಪವೃಕ್ಷದಂತೆಯೂ, ವಿದ್ವಜ್ಜನರಿಗೆ ಕಲ್ಪವೃಕ್ಷವೆಂದೂ ಧರ್ಮಾವತಾರನೆಂದು ಗೂಳಿಯ ಬಾಚಿಯ ಧರ್ಮ ಸಮನ್ವಯವನ್ನು ಬಣ್ಣಿಸುತ್ತದೆ. ಈ ಶಾಸನದಲ್ಲಿ ಇವನು, ಜೈನ, ಶೈವ, ಶ್ರೀವೈಷ್ಣವ ಹಾಗೂ ಬೌದ್ಧ ಧರ್ಮಗಳಿಗೆ ನೀಡಿದ ಕೊಡುಗೆಯನ್ನು ವಿವರಿಸುತ್ತದೆ. ಗೂಳಿಬಾಚಿದೇವನು

ಕಯ್ಯಾಡಳದಲ್ಲಿ 'ಶ್ರೀನಾರಾಯಣ' ದೇವಾಲಯವನ್ನು ನಿರ್ಮಿಸುತ್ತಾನೆ.[14] ಅಲ್ಲದೆ ಗೂಳಿಬಾಚಿದೇವನು ಕೈದಾಳದಲ್ಲಿ ಅನೇಕ ಶಿವಾಲಯಗಳನ್ನು ಮಾಡಿಸಿದನು. ಗೂಳಿಬಾಚಿದೇವ ಕೈದಾಳದಲ್ಲಿ ನಿರ್ಮಿಸಿದ ಪ್ರಮುಖ ದೇವಾಲಯಗಳೆಂದರೆ "ತನ್ನ ತಂದೆ ಸಾಮಂತ ಗಂಗೈಯನಿಗೆ ಪರೋಕ್ಷ ವಿನಯವಾಗಿ ಗಂಗೇಶ್ವರ ದೇವರ ದೇವಾಲಯವನ್ನು ಕೈದಾಳದಲ್ಲಿ ನಿರ್ಮಿಸಿ ಆ ದೇವರ ಅಂಗ, ರಂಗಬೋಗಕ್ಕೆ ಭೂಮಿಯನ್ನು ಮತ್ತು ದಿಬ್ಬೂರು ಎಂಬ ಪ್ರದೇಶವನ್ನು ಪರೋಕ್ಷ ವಿನಯವಾಗಿ ಧಾರೆಯೆರೆದು ಕೊಟ್ಟನು. ಶ್ರೀ ಕೇಶವದೇವರ ರಂಗಬೋಗಕ್ಕೆ ಅಷ್ಟವಿದಾರ್ಚನೆಗೆ ಬ್ರಾಹ್ಮಣರಾಹಾರದಾನಕ್ಕೆ ದಿಬ್ಬೂರ ಕೆರೆಯ ಕೆಳಗೆ ಗದ್ದೆ ತೋಟವನ್ನು ದಾನ ನೀಡುತ್ತಾನೆ. ತನ್ನ ಮುತ್ತಾತ ಸಾಮಂತ ಚಲವರೆವ ಎಂಬುವನಿಗೆ ಪರೋಕ್ಷ ವಿನಯವಾಗಿ 'ಕಿತ್ತಗಳಿ' ಎಂಬ ಪ್ರದೇಶದಲ್ಲಿ 'ಚೆಲವರೇಶ್ವರ' ಎಂಬ ಶಿವದೇವಾಲಯವನ್ನು ಮಾಡಿಸಿದನು. ಆ ಚಲವರೇಶ್ವರ ದೇವರ ಅಂಗಭೋಗ ಜೀರ್ಣೋದ್ಧಾರಕ್ಕೆ ತಪೋಧನರ ಆಹಾರಧಾನಕ್ಕೆ ಕಿತ್ತಗಳಿಯ ಕೆರೆಯ ಕೆಳಗಿನ ಗದ್ದೆಯನ್ನು ಬಿಟ್ಟನು. ತನ್ನ ಮಗಳು ಕುಮಾರಿ ಚನ್ನವ್ವೆ ನಾಯಕಿತಿಗೆ ಪರೋಕ್ಷ ವಿನಯವಾಗಿ ಶ್ರೀರಾಮೇಶ್ವರ ದೇವರ ದೇವಾಲಯವನ್ನು ಮಾಡಿಸಿ ಆ ದೇವರಿಗೆ ದಾನ ನೀಡುತ್ತಾನೆ. ಬಾಚಿದೇವನ ಹೆಂಡತಿ ಭೀಮಲೆ ನಾಯಕಿತಿಗೆ ಪರೋಕ್ಷ ವಿನಯವಾಗಿ ಭೀಮ ಜಿನಾಲಯವೆಂಬ ಬಸದಿಯನ್ನು ಮಾಡಿಸಿ, ಭೀಮ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಭೀಮ ಜಿನಾಲಯದ ಶ್ರೀಚೆನ್ನಪಾರ್ಶ್ವ ದೇವರ ರಂಗಬೋಗ, ಋಷಿಯರಾಹಾರಧಾನ ಹಾಗೂ ಬಸದಿಯ ಜೀರ್ಣೋದ್ಧಾರಕ್ಕೆ ದತ್ತಿಯನ್ನು ಕೊಡುತ್ತಾನೆ ಎಂಬ ವಿವಿಧ ಧರ್ಮಗಳ ದೇವಾಲಯಗಳನ್ನು ನಿರ್ಮಿಸಿದ ಮಾಹಿತಿ ದೊರೆಯುತ್ತದೆ. ಈ ಶಾಸನದಲ್ಲಿ ಗೂಳಿಬಾಚಿದೇವ ತನ್ನ ಕುಟುಂಬದ ವ್ಯಕ್ತಿಗಳಿಗೆ ಪರೋಕ್ಷ ವಿನಯವಾಗಿ ನಿರ್ಮಿಸಿದ ದೇವಾಲಯಗಳಾಗಿವೆ. ಇಲ್ಲಿ ತನ್ನ ತಂದೆ, ಗಂಗಯ್ಯನ, ತಾತ ಚಲವರಿವ, ಪ್ರೀತಿಯ ಮಗಳು ಚನ್ನವ್ವೆನಾಯಕಿತಿ, ಪ್ರೀತಿಯ ಮಡದಿ ಭೀಮಲೆಗೆ ಪರೋಕ್ಷ ವಿನಯವಾಗಿ ದೇವಾಲಯಗಳನ್ನು ನಿರ್ಮಿಸುತ್ತಾನೆ. ಇಲ್ಲಿ ಬಾಚಿದೇವ ನಿರ್ಮಿಸಿದ ಎಲ್ಲಾ ದೇವಾಲಯಗಳು ಪರೋಕ್ಷ ವಿನಯವಾಗಿ ನಿರ್ಮಿಸಿರುವುದರಿಂದ ಬಾಚಿದೇವನ ಜೀವನದಲ್ಲಿ ತಂದೆ, ಮಗಳು ಮತ್ತು ಪ್ರೀತಿಯ ಮಡದಿ ಇವರೆಲ್ಲರೂ ತನ್ನ ಕಣ್ಣೆದುರಲ್ಲೇ ಮರಣ ಹೊಂದಿದ್ದಾರೆ. ಈ ದುರಂತಗಳು ಅವನ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿರಬೇಕು. ಇಂತಹ ಕೌಟುಂಬಿಕ ದುರಂತಗಳಿಂದ ನೊಂದ ಅವನ ಮನಸ್ಸು ಜನಮುಖಿ ಹಾಗೂ ಧಾರ್ಮಿಕ ಕಾರ್ಯಗಳತ್ತ ತಿರುಗಿ ಈ ರೀತಿಯ ಸರ್ವಧರ್ಮ ಸಮನ್ವಯತೆಯನ್ನು ಕೈಗೊಂಡಿದ್ದಾನೆ. ಇದಕ್ಕೆ ಪುಷ್ಟಿ ನೀಡುವಂತೆ ತುಮಕೂರು ಜಿಲ್ಲೆಯ ಕೊಂಡಾಪುರದ ಶಾಸನದಲ್ಲಿಯೂ ಮರುಗೆರೆ ನಾಡಾಳ್ವ ಗೂಳಿಬಾಚಿಯ ಸಾಮಂತ ರಾಜ್ಯಾಭ್ಯುದಯ ಕರಣಕಾರಣನೆನಿಸಿದ ಮಾರಮಯ್ಯ ಎಂಬುವನು ಸಾಮಂತ ಗೂಳಿಕ ನಮಬಾಚಿದೇವನ ಕೈಯಲ್ಲಿ ಭೂಮಿಯನ್ನು ಪಡೆದು ಮಾರಸಮುದ್ರವೆಂಬ 'ಕನ್ನೆಗೆರೆ'ಯನ್ನು ಕಟ್ಟಿಸಿ ಆ ಕೆರೆಯನ್ನು ಜೈನ ಗುರುವಿಗೆ ಬಿಟ್ಟ ಮಾಹಿತಿಯನ್ನು ಒಳಗೊಂಡಿದೆ.[15] ಈ ಎರಡೂ ಪ್ರಮುಖ ಶಾಸನಗಳು ನರಸಿಂಹನ ಸಾಮಂತ ಗೂಳಿಬಾಚಿದೇವ ಹಾಗೂ ಅವನ ಅಧಿಕಾರಿ ಸೇನಬೋವ ಮಾರಮಯ್ಯ ಇವರುಗಳು ಜೈನಧರ್ಮಕ್ಕೆ ನೀಡಿದ ಕೊಡುಗೆಗಳನ್ನು ತಿಳಿಸುತ್ತವೆ.

ಮುಂದುವರಿದು, ತುಮಕೂರು ಜಿಲ್ಲೆಯ ಪಂಡಿತರಹಳ್ಳಿಯ ಕ್ರಿ.ಶ.12ನೇ ಶತಮಾನದ ಶಾಸನದಲ್ಲಿ[16] ಜೈನ ಧರ್ಮದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಶಾಸನದಲ್ಲಿ ಒಂದನೇ ನರಸಿಂಹನ ಪಾದಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನ ಸರ್ವಾಧಿಕಾರಿ ಸೇನಾಧಿಪತಿ ದಂಡನಾಯಕ ಎರೆಯಂಗಮಯ್ಯನ ಹೆಂಡತಿ ಮಾಚಿಯಕ್ಕ "ಈಗಿನ ಮಯ್ಯಾಡಳದ ದಿವ್ಯತೀರ್ಥ ಕ್ಷೇತ್ರದಲ್ಲಿ ಒಳ್ಳೆಯ

ಧರ್ಮದ ಅಪೇಕ್ಷೆಯಿಂದ, ಇದನ್ನು ನೋಡಿದರೆ ಇದರ ಮೇಲ್ಭಾಗದ ಶ್ವೇತವರ್ಣದ ಗೋಪುರವು ಇಡೀ ನಾಡಿನೆಲ್ಲೆಡೆ ಅತ್ಯಂತ ಶ್ರೇಷ್ಠವಾದದ್ದೆನಿಸಿ ಶೋಭಿಸುವಂತಹ ಜೈನ ಬಸದಿಯನ್ನು ಭೂಮಂಡಲವೇ ಹೊಗಳುವಂತೆ ಮಾಚಿಯಕ್ಕ ಮಾಡಿಸುತ್ತಾಳೆ" ಎಂಬ ಮಾಹಿತಿ ದೊರೆಯುತ್ತದೆ.[17] ಈಕೆ ಕಟ್ಟಿಸಿದ ಬಸದಿಗೆ ಅನುಕೂಲವಾಗುವಂತೆ 'ಪದ್ಮಾವತಿಗೆರೆ'ಯೆಂಬ ಕೆರೆಯನ್ನು ಕಟ್ಟಿಸಿಕೊಡುತ್ತಾಳೆ. ಮತ್ತು ಇದರ ಸುತ್ತಮುತ್ತಲಿನ ಪ್ರದೇಶವನ್ನು ಜೈನಮುನಿಗಳ ಆಹಾರದಾನಕ್ಕೆ ಜೀರ್ಣೋದ್ಧಾರಕ್ಕೆ, ಚರುಗಿಂಗೆ (ಜೈನಗುರುಗಳ ಭಿಕ್ಷಾಟಣೆಗೆ) ಅಕ್ಷಯದಾನಕ್ಕೆಂದು ಮಾಚಿಯಕ್ಕ ನೀಡಿದ ಕೊಡುಗೆಗಳನ್ನು ಈ ಶಾಸನದಲ್ಲಿ ವರ್ಣಿಸಲಾಗಿದೆ.[18]

ಅದೇ ರೀತಿ ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರಿನ ಕ್ರಿ.ಶ.12ನೇ ಶತಮಾನದ ಶಾಸನದಲ್ಲಿ ನರಸಿಂಹನ ಸಾಮಂತ ಗೋವಿದೇವನ ಹೆಂಡತಿ ಶ್ರೀಯಾದೇವಿ ಜಿನ ಪ್ರತಿಮೆಯನ್ನು ಮಾಡಿಸಿದ ಉಲ್ಲೇಖವಿದೆ.[19] ಸಾಮಂತ ಗೋವಿದೇವನನ್ನು ಚಿಕ್ಕನಾಯಕನಹಳ್ಳಿ ತಾಲೂಕಿನ ಯಾದಘಟ್ಟದ ಶಾಸನದಲ್ಲಿ "ಮಾಹೇಶ್ವರ, ಬೌದ್ಧ, ವೈಷ್ಣವಾರುಹತ ಚತುಸ್ಸಮಯ ಸಮುದ್ಧರಣ"[20] ಎಂದು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಅಂದರೆ, ಈತ ಶಿವ, ಬುದ್ಧ, ವಿಷ್ಣು, ಜಿನ ಎಂಬ ನಾಲ್ಕು ಧರ್ಮಗಳನ್ನು ಉದ್ಧರಿಸಿದವನು ಎಂಬ ಮಾಹಿತಿ ದೊರೆಯುತ್ತದೆ.

ಇನ್ನು ಜೈನರಲ್ಲಿ ಆಚರಣೆಯಲ್ಲಿದ್ದ ಸಲ್ಲೇಖನ ಅಥವ ಸಮಾದಿ ಮರಣದ ಬಗ್ಗೆ ಗುಬ್ಬಿ ತಾಲೂಕಿನ ನಿಟ್ಟೂರಿನಲ್ಲಿ ಕ್ರಿ.ಶ.12ನೇ ಶತಮಾನದಲ್ಲಿ ಮಾಹಿತಿ ದೊರೆಯುತ್ತದೆ. ಈ ಶಾಸನದಲ್ಲಿ ಬಾಳಚಂದ್ರ ಪಂಡಿತ ದೇವರ ಪ್ರಿಯ ಶಿಷ್ಯೆ ಮಾಳವ್ವೆ ಇವಳ ಸೊಸೆ ಚೌಡಿಯಕ್ಕ. ಈ ಚೌಡಿಯಕ್ಕನಿಗೆ ಪದ್ಮಲೆ, ಮಲ್ಲ ಮತ್ತು ಮಾಳ ಎಂಬ ಮೂವರು ಮಕ್ಕಳ ಉಲ್ಲೇಖವಿದೆ. ಈ ಶಾಸನದಲ್ಲಿ ಅತ್ತೆ ಸೊಸೆಯರಾದ ಮಾಳವ್ವೆ ಮತ್ತು ಇವಳ ಸೊಸೆ ಚೌಡಿಯಕ್ಕ ಈ ಇಬ್ಬರು ಮಹಿಳೆಯರ ಸಮಾಧಿ ಮರಣವನ್ನು ತಿಳಿಸುತ್ತದೆ.[21] ಇದೇ ಶಾಸನದ ಮುಂದಿನ ಭಾಗದಲ್ಲಿ ಮಾಳವ್ವೆಯ ವಂಶದ ಇನ್ನುಳಿದ ವ್ಯಕ್ತಿಗಳು ನಿಷಿಧಿಯಾದುದರ ಬಗೆಗಿನ ಉಲ್ಲೇಖವಿದೆ. ಮಾಳವ್ವೆಯ ಮಗ ಬಾಮಿಸೆಟ್ಟಿಯ ಮದವಳಿಗೆ ಬೂಚವ್ವೆಯ ನಿಷಿಧಿ. ಇದು ಮಾಳವ್ವೆಯ ಮತ್ತೊಬ್ಬ ಸೊಸೆಯಾದ ಬೂಚವ್ವೆಯ ಸಲ್ಲೇಖನ ಮರಣವನ್ನು ತಿಳಿಸುತ್ತದೆ.[22] ಇದೇ ಶಾಸನದ ಬಲಭಾಗದಲ್ಲಿ ಮಾಳವ್ವೆಯ, ಮಲ್ಲಿಸೆಟ್ಟಿಯ ತಂದೆ ಗುಣದ ಬೆಡಂಗ ಮಲ್ಲಿಶೆಟ್ಟಿಯು ಆತನ ಪ್ರಿಯ ಪುತ್ರ ಮಾಳಯ್ಯ ಎಂಬ ಈ ಇಬ್ಬರ ಸಲ್ಲೇಖನವನ್ನು ತಿಳಿಸುವ ಶಾಸನವಾಗಿದೆ.[23] ಈ ಮೂರು ಶಾಸನಗಳಲ್ಲಿ ಬಾಳಚಂದ್ರ ಪಂಡಿತ ದೇವರ ಪ್ರಿಯ ಶಿಷ್ಯೆಯರಾದ ವಿನಯ ನಿಧಿ ಮಾಳಕ್ಕನ ವಂಶಾವಳಿಯ ಜೊತೆಗೆ ಅವಳ ಕುಟುಂಬದ ಬಹುತೇಕ ಸದಸ್ಯರು ಸಲ್ಲೇಖನ ವ್ರತದಿಂದ ಮರಣ ಪಡೆದ ವಿವರಗಳನ್ನು ತಿಳಿಸುತ್ತವೆ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಕೊತ್ತಗೆರೆಯ ಕ್ರಿ.ಶ. 1157ರ ಶಾಸನದಲ್ಲಿ ನರಸಿಂಹನ ಮಹಾಪ್ರಧಾನ ದಂಡನಾಯಕ ಉದಯಣ್ಣ ಎಂಬುವನು ಶ್ರೀಧರಪುರವಾದ ಕೊತ್ತಗೆರೆಯ ಅಗ್ರಹಾರದ ಶ್ರೀ ಪದುಮನಾಭ, ಶ್ರೀಕೇಶವ ದೇವರ ರಂಗಭೋಗ, ಜೀರ್ಣೋದ್ಧಾರ ನಂದಾದೀವಿಗೆಗೆ ಕೊತ್ತಗೆರೆಯ ಸಮಸ್ತ ಸುಂಕ ಮತ್ತು ಸರ್ವ್ವಾದಾಯವನ್ನು ಶ್ರೀಕೇಶವ ದೇವರಿಗೆ ಧಾರಾಪೂರ್ವಕ ಮಾಡಿಕೊಟ್ಟನು. ಈ ಧರ್ಮವನ್ನು ಉದಯಣ್ಣನು ಮನ್ಮಹಾಪ್ರಧಾನ ಸೇನಾಧಿಪತಿ, ಸರ್ವಾಧಿಕಾರಿ ಹಿರಿಯ ಮನೆವೆಗ್ಗಡೆ ಬಲುಪಯ್ಯ ಎಂಬುವನ ಅಪ್ಪಣೆಯಿಂದ ಕೊಟ್ಟನು.[24] ಎಂಬ ಮಾಹಿತಿ ಇದ್ದರೆ, ತಿಪಟೂರು ತಾಲ್ಲೂಕಿನ ಶಿವರ ಎಂಬ ಪ್ರದೇಶದ ಕ್ರಿ.ಶ.1164ರ ಶಾಸನದಲ್ಲಿ ನರಸಿಂಹನ ದಂಡನಾಯಕ ಹೆಗ್ಗಡೆ ಮಾದಿಮಯ್ಯ ಶಿವುರ ಎಂಬಲ್ಲಿ ಮಹಾದೇವ ಮತ್ತು ಶ್ರೀ ಚನ್ನಕೇಶವ ದೇವರ ದೇವಾಲಯವನ್ನು ಪ್ರತಿಷ್ಠೆ ಮಾಡಿಸಿದನು. ಜೊತೆಗೆ ಇದೇ ಶಾಸನದಲ್ಲಿ ಆಚಾರ್ಯ ಅಪ್ಪಣ

ಭಟ್ಟೋಪಾಧ್ಯಾಯ ಎಂಬುವರು ನಾರಾಯಣ ದೇವರನ್ನು ಪ್ರತಿಷ್ಠಾಪಿಸಿದಕ್ಕಾಗಿ, ದೇವತಾ ಸನ್ನಿದಾನವನ್ನು ಧಾರೆಯೆರೆದು ಕೊಟ್ಟನು. ಈ ಶಾಸನದಲ್ಲಿ ಮುಖ್ಯವಾಗಿ ನರಸಿಂಹನ ಅಧಿಕಾರಿ ಮಾದಿಮಯ್ಯ, ಮಹಾದೇವ ಹಾಗೂ ಕೇಶವದೇವರ ದೇವಾಲಯಗಳನ್ನು ಮಾಡಿಸಿ ಅದರ ಆಚಾರ್ಯನಿಗೆ ದಾನ ನೀಡುತ್ತಾನೆ. ಇಲ್ಲಿ ಒಬ್ಬನೇ ಅಧಿಕಾರಿ ಶೈವ ಮತ್ತು ವೈಷ್ಣವ ಎರಡೂ ಧರ್ಮಗಳಿಗೆ ದಾನ ನೀಡಿರುವುದು ವಿಶೇಷವಾಗಿದೆ.[25]

ಇವೇ ಅಲ್ಲದೆ ಚಿಕ್ಕನಾಯಕನಹಳ್ಳಿ ತಾಲೂಕಿನ ತಂಡಗದ ಕ್ರಿ.ಶ.1149ರ ಶಾಸನದಲ್ಲಿ[26] ನರಸಿಂಹನ ಸಾಮಂತ ಗೋವಿದೇವ 'ಮಗರೆ ಮುನ್ನೂರು' ಎಂಬ ಪ್ರದೇಶವನ್ನು ಆಳುತ್ತಿದ್ದನು. ಇವನ ತತ್ಪಾದ ಪದ್ಮೋಪಜೀವಿ ತಂಡಗದ ಮಾಚರಸ. ಇವನು ಶಿವಧರ್ಮೋದ್ಯುಕ್ತನಾಗಿದ್ದನು ಜೊತೆಗೆ ತನ್ನ ಧಾರ್ಮಿಕ ಕೀರ್ತಿ ಮೂರು ಲೋಕವೂ ಬಣ್ಣಿಸುವಂತೆ, ತನ್ನ ಹೆಸರು ಮತ್ತು ಕೀರ್ತಿ ಶಾಶ್ವತವಾಗಲೆಂದು ಶಿವಗೃಹಗಳನ್ನು ಮಾಡಿಸುತ್ತ, ತಂಡಗದಲ್ಲಿ ಏಚೇಶ್ವರ ಮತ್ತು ಶ್ರೀ ಮುದ್ದೇಶ್ವರ ಎಂಬ ಎರಡು ದೇವಾಲಯಗಳನ್ನು ಪ್ರತಿಷ್ಠೆ ಮಾಡಿಸಿ ಶ್ರೀ ಅಮೃತರಾಶಿ ಪಂಡಿತನಿಗೆ ಧಾರಾಪೂರ್ವಕ ಮಾಡಿಕೊಟ್ಟನು ಎಂಬ ಮಾಹಿತಿ ಇದ್ದರೆ, ಚಿಕ್ಕನಾಯಕನ ಹಳ್ಳಿ ತಾಲೂಕಿನ ನೇರ್ಲಕೆರೆಯ ಕ್ರಿ.ಶ.1172ರ ಶಾಸನದಲ್ಲಿ[27], ಮಾದಿಗೌಡ ಎಂಬುವನು ನೇರಲಕೆರೆಯಲ್ಲಿ 'ಸುಗ್ಗೇಶ್ವರ ದೇವರನ್ನು' ಕಟ್ಟಿಸಿ ಮಗರೆನಾಡ ರಾಜಗುರು ಅಣುವಗೆರೆಯ ಜ್ಞಾನಶಕ್ತಿಯ ಅಮರಚಂದ್ರ ಭೂಷಣನ ಪುತ್ರ ಗುರುಭಕ್ತನಿಗೆ ದಾನ ನೀಡಿದನು ಎಂಬ ವಿಚಾರ ದೊರೆಯುತ್ತದೆ.

ಶೈವ ಧರ್ಮದ ಪಂಥಗಳಲ್ಲಿ ಒಂದಾದ ಕಾಳಮುಖ ಪಂಥವು ತುಮಕೂರು ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ನರಸಿಂಹನ ಕಾಲದ ಚಿಕ್ಕನಾಯಕನಹಳ್ಳಿ ತಾಲೂಕಿನ ಕೋರಗೆರೆಯ ಶಾಸನವು ಉದಾಹರಣೆಯಾಗಿದೆ.[28] ಈ ಶಾಸನದಲ್ಲಿ ಶಿವಶಕ್ತಿದೇವನೆಂಬ ನೈಷ್ಠಿಕ ಮುನಿಯ ಉಲ್ಲೇಖವಿದೆ. ಬಹುತೇಕ ಶಾಸನಗಳಲ್ಲಿ ಬರುವ 'ಸ್ಥಾನ' 'ನೈಷ್ಠಿಕ ಸ್ಥಾನ' 'ಸ್ಥಾನಪತಿ' ಎಂಬ ಪದಗಳು ಶೈವಗುರುಗಳು ವಾಸವಾಗಿದ್ದ ದೇವಸ್ಥಾನಗಳನ್ನು ಸೂಚಿಸುತ್ತವೆ. ಆ ದೇವಸ್ಥಾನಗಳ ಆಗುಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು ಸ್ಥಾನಪತಿಗಳು ಅಥವಾ ಸ್ಥಾನಿಕರು. ಒಬ್ಬರಿಗಿಂತ ಹೆಚ್ಚು ಗುರುಗಳಿದ್ದರೆ ಅವರಲ್ಲಿ ಹಿರಿಯನೇ ಸಾಮಾನ್ಯವಾಗಿ ಸ್ಥಾನಪತಿ ಎನಿಸಿಕೊಳ್ಳುತ್ತಿದ್ದನು. ಶೈವಗುರುಗಳು ಅಖಂಡ ಬ್ರಹ್ಮಚಾರಿಗಳಾಗಿದ್ದುಕೊಂಡು, ಬ್ರಹ್ಮಚರ್ಯವನ್ನು ಪಾಲಿಸುವ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದ ಸ್ಥಾನವೇ ನೈಷ್ಠಿಕ ಸ್ಥಾನ.

ಒಟ್ಟಾರೆ ತುಮಕೂರು ಜಿಲ್ಲೆಯ ಹೊಯ್ಸಳ ಅರಸರ ಧಾರ್ಮಿಕ ಶಾಸನಗಳನ್ನು ಅವಲೋಕಿಸಿದಾಗ, ಜಿಲ್ಲೆಯಲ್ಲಿ ಹೊಯ್ಸಳ ಅರಸರು ಎಲ್ಲಾ ಮತಧರ್ಮಗಳನ್ನೂ ಸಮಾನತೆಯಿಂದ ಕಾಣುವುದರ ಮೂಲಕ ಸರ್ವಧರ್ಮ ಸಮನ್ವಯತೆಯನ್ನು ಸಾಧಿಸಿರುವುದು ಕಂಡುಬರುತ್ತದೆ. ಇವರ ಆಸ್ಥಾನದಲ್ಲಿದ್ದ ಪ್ರಮುಖ ಸಾಮಂತರು, ದಂಡನಾಯಕರು ಮತ್ತು ಮಂತ್ರಿಗಳು ವಿವಿಧ ಧರ್ಮಗಳಿಗೆ ಸೇರಿದವರಾಗಿದ್ದರು. ಇವರು ನಿರ್ಮಿಸಿದ ದೇವಾಲಯಗಳಿಗೆ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಸ್ವತಃ ಹೊಯ್ಸಳ ಅರಸರೇ ನೇರವಾಗಿ ದಾನದತ್ತಿಗಳನ್ನು ನೀಡುವುದರ ಮೂಲಕ ಉದಾರವಾಗಿ ಪ್ರೋತ್ಸಾಹಿಸಿರುವುದನ್ನು ಗಮನಿಸಬಹುದು. ಜೊತೆಗೆ ಹೊಯ್ಸಳರ ಸಾಮ್ರಾಜ್ಯದಲ್ಲಿ ಪುರುಷರಷ್ಟೇ ಸಮಾನವಾಗಿ ಮಹಿಳೆಯರೂ ಸಹ ವಿವಿಧ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಗಮನಾರ್ಹವಾದ ವಿಚಾರವಾಗಿದೆ.

**ಕೊನೆಟಿಪ್ಪಣಿಗಳು**

1. ಗೋಪಾಲ್ ರಾವ್. ಹೆಚ್.ಎಸ್. (ಸಂ.) (2010). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.25,*

*ತಿಪಟೂರು, ಶಾಸನ ಸಂಖ್ಯೆ 48.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಪುಟ. 481

2. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24 ಗುಬ್ಬಿ, ಶಾಸನ ಸಂಖ್ಯೆ 5, ಆಲದಗೆರೆ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಪುಟ. 262
3. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24 ಗುಬ್ಬಿ, ಶಾಸನ ಸಂಖ್ಯೆ.5, ಆಲದಗೆರೆ.* ಪುಟ. 262
4. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ 24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 107, ಹೆಗ್ಗೆರೆ.* ಪುಟ. 257
5. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 104, ಹೆಗ್ಗೆರೆ.* ಪುಟ. 519
6. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24 ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ.107, ಹೆಗ್ಗೆರೆ.* ಪುಟ. 519
7. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24 ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ.107, ಹೆಗ್ಗೆರೆ.* ಪುಟ. 519
8. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 78, ಯಾದಘಟ್ಟ.* ಪುಟ. 480
9. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 101, ಹುಳಿಯಾರು.* ಪುಟ. 517
10. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24. ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 104, ಹೆಗ್ಗೆರೆ.* ಪುಟ. 523
11. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ತುಮಕೂರು, ಶಾಸನ ಸಂಖ್ಯೆ 11, ಕೈದಾಳ.* ಪುಟ.7
12. ಅದೇ. ಪುಟ.7
13. ಅದೇ. ಪುಟ.7
14. ಅದೇ. ಪುಟ.7
15. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24,* ಕೊಂಡಾಪುರ. ಪುಟ. 41
16. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ತುಮಕೂರು, ಶಾಸನ ಸಂಖ್ಯೆ 61, ಪಂಡಿತರಹಳ್ಳಿ.* ಪುಟ. 127
17. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ತುಮಕೂರು, ಶಾಸನ ಸಂಖ್ಯೆ 61, ಪಂಡಿತರಹಳ್ಳಿ.* ಪುಟ. 127
18. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, 41–53ನೇ ಸಾಲುಗಳು.* ಪುಟ. 128
19. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24,*

*ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 101, ಹುಳಿಯಾರು.* ಪುಟ. 517

20. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 78, ಯಾದಘಟ್ಟ.* ಪುಟ. 480

21. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಗುಬ್ಬಿ, ಶಾಸನ ಸಂಖ್ಯೆ.45, ನಿಟ್ಟೂರು.* ಪುಟ. 313

22. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಗುಬ್ಬಿ, ಶಾಸನ ಸಂಖ್ಯೆ.45, ನಿಟ್ಟೂರು.* ಪುಟ. 314

23. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಗುಬ್ಬಿ, ಶಾಸನ ಸಂಖ್ಯೆ.45, ನಿಟ್ಟೂರು.* ಪುಟ. 314

24. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಕುಣಿಗಲ್, ಶಾಸನ ಸಂಖ್ಯೆ 6, ಕೊತ್ತಗೆರೆ.* ಪುಟ. 200

25. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ತಿಪಟೂರು, ಶಾಸನ ಸಂಖ್ಯೆ 83, ಶೀವರ.* ಪುಟ. 510

26. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 32, ತಂಡಗ.* ಪುಟ. 410

27. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24, ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ 43, ನೇರಲೆಕೆರೆ.* ಪುಟ. 426

28. ಶ್ರೀನಿವಾಸ ರಿತ್ತಿ. (ಸಂ.) (2009). *ಎಪಿಗ್ರಾಫಿಯಾ ಕರ್ನಾಟಿಕಾ–ಸಂ.24 ಚಿಕ್ಕನಾಯಕನಹಳ್ಳಿ, ಶಾಸನ ಸಂಖ್ಯೆ.17, ಕೋರಗೆರೆ.* ಪುಟ. 373